ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ:ಎಂ:6/ಅ.ದಾ./ಅ.ಕೋ/ಆಶಾ ನಂ:3(ii)2009–10 ದಿನಾಂಕ:25.05.2010

ಅತ್ಯಾದ್ಯತೆ

**ಸುತ್ತೋಲೆ**

ವಿಷಯ: ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ :483/2004ರ ತೀರ್ಪು ದಿ:13.04.2009 ರನ್ವಯ ಶಾಲೆಗಳಲ್ಲಿ ಅಗ್ನಿ ನಂದಕಗಳನ್ನು ಅಳವಡಿಸುವ ಕುರಿತು.

ಉಲ್ಲೇಖ:1.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು ರವರ ಅ.ಸ.ಪ ಸಂಖ್ಯೆ ಸಪ್ರಶಾ/ಪ್ರಾ,ಪ್ರೌ.ಶಿ/ಆಶಾ–127/2010, ದಿನಾಂಕ :03.05.2010.

2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ರವರ ಪತ್ರ ಸಂಖ್ಯೆ:ಸಶಿಅ.ಶಿಕ/ಬೆಂ.ಆ.ಬಿ.ಎಫ್.110/08–09, ದಿನಾಂಕ:07.05.09

* * * * *

ಭಾರತದ ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ:13.04.2009ರಲ್ಲಿನ ತೀರ್ಪಿನಂತೆ ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಅಗ್ನಿ ಆಕಸ್ಮಿಕಗಳು ನಡೆಯದಂತೆ ಅನಾಹುತಗಳನ್ನು ತಡೆಯುವ ಸಲುವಾಗಿ ಅಗ್ನಿ ನಂದಿಸುವ ಸಾಧನಗಳನ್ನು ಅಳವಡಿಸಲು ಆದೇಶವಾಗಿರುತ್ತದೆ.

ಉಲ್ಲೇಖ(1)ರಲ್ಲಿನ ಸರ್ಕಾರದ ಪತ್ರದಲ್ಲಿ ಶಾಲಾ ಹಂತದಲ್ಲಿ ಖರೀದಿಸಿ ಅಗ್ನಿನಂದಕಗಳನ್ನು ಅಳವಡಿಸಲು ಆದೇಶವಾಗಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ನಿರ್ದೇಶಕರ ದಿನಾಂಕ :07.05.09ರ ಪತ್ರದಲ್ಲಿ ಈಗಾಗಲೇ ಕೆಲವು ಜಿಲ್ಲೆಗಳ ಶಾಲೆಗಳಲ್ಲಿ ಅಗ್ನಿ ನಂದಕ ಸಾಧನವನ್ನು ಅಳವಡಿಸಲು ಕ್ರಮ ತೆಗೆದುಕೊಂಡಿರುವುದಾಗಿ ತಿಳಿದುಬಂದಿದೆ. ಆದರೆ, ಈ ಸಾಧನಗಳನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಕೂಡಲೇ ಅಳವಡಿಸಬೇಕಾಗಿರುತ್ತದೆ. ಆದುದರಿಂದ, ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಮಂಜೂರಾಗಿರುವ ಶಾಲಾ ಅನುದಾನದಿಂದ ಅಥವಾ ಶಾಲೆಯಲ್ಲಿ ಲಭ್ಯವಿರುವ ಇತರ ಯಾವುದೇ ಅನುದಾನದಿಂದ ಪ್ರತಿ ಶಾಲೆಗೆ ಒಂದರಂತೆ ಅಗ್ನಿನಂದಕ ಸಾಧನವನ್ನು ತುರ್ತಾಗಿ ಖರೀದಿಸಿ ಅಳವಡಿಸಬೇಕಾಗಿದೆ. ಅದರಂತೆ ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲು ಆದೇಶಿಸಿದೆ.

ISI ಪ್ರಮಾಣೀಕೃತ 5 ಕೆ.ಜಿ. ಪ್ರಮಾಣದ Portable Fire Extinguisher (Dry powder) ಅನ್ನು ಯಾವುದೇ ಸಂಸ್ಥೆಯಿಂದ ಖರೀದಿಸಿ ಯಾವುದೇ ಅಗ್ನಿ ಆಕಸ್ಮಿಕಗಳಾದಲ್ಲಿ ತುರ್ತಾಗಿ ಉಪಯೋಗಿಸಲು ಸಿದ್ಧವಾಗಿಟ್ಟುಕೊಳ್ಳತಕ್ಕದ್ದು.

ಪರ್ಯಾಯವಾಗಿ, Directorate of Supplies and Disposals (DGS&D) ರವರು ನಿಗದಿಪಡಿಸಿರುವ Rate Contract ಅನ್ವಯ ಸಹ 5 ಕೆ.ಜಿ. ಪ್ರಮಾಣದ Portable Fire Extinguishers (Dry powder) ಅನ್ನು ಅಂಗೀಕೃತ ಸಂಸ್ಥೆಗಳಿಂದ ಖರೀದಿಸಬಹುದಾಗಿದೆ. ಡಿ.ಜಿ.ಎಸ್.&ಡಿ. ವೆಬ್‌ಸೈಟ್ ವಿಳಾಸ : http://dgsnd.gov.in

- ಸಾಧನಗಳ ಖರೀದಿಯನ್ನು ಶಾಲಾಭಿವೃದ್ಧಿ ಹಾಗೂ ಮೇಲ್ವಿಚಾರಣ ಸಮಿತಿ(ಎಸ್.ಡಿ.ಎಂ.ಸಿ.)ಯವರಿಗೆ ವಹಿಸುವುದು. ಖರೀದಿ ಪ್ರಕ್ರಿಯೆಯು ದಿನಾಂಕ:30.06.2010 ರೊಳಗೆ ಮುಗಿಯಬೇಕು.
- ಇದು ಕಾಲಮಿತಿ ವಿಷಯವಾದ್ದರಿಂದ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕಾಗಿರುವುದರಿಂದ ಕೂಡಲೇ ಕ್ರಮ ಜರುಗಿಸಿ ವರದಿ ಸಲ್ಲಿಸುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಲ್ಲಿ ಅಗ್ನಿ ನಂದಕಗಳನ್ನು ನಿಗದಿತ ವೇಳೆಗೆ ಅಳವಡಿಸಿರುವ ಬಗ್ಗೆ ಪ್ರಗತಿ ವರದಿಯನ್ನು ತಮ್ಮ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ರವರಿಗೆ ಸಲ್ಲಿಸುವುದು.
- ಉಪನಿರ್ದೇಶಕರು (ಆಡಳಿತ) ರವರು ಎಲ್ಲಾ ಶಾಲೆಗಳಲ್ಲಿ ಅಳವಡಿಸಿರುವ ಬಗ್ಗೆ ಕ್ರೋಢೀಕೃತ ಪ್ರಗತಿ ವರದಿಯನ್ನು ದಿನಾಂಕ:10.07.2010ರೊಳಗೆ ಜಂಟಿ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ರವರಿಗೆ ಸಲ್ಲಿಸುವುದು.

25/5/10

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಪ್ರತಿಯನ್ನು ಗೌರವ ಪೂರ್ವಕವಾಗಿ ಸಲ್ಲಿಸಿದೆ:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮೇಲ್ಕಂಡ ಅಂಶಗಳನ್ನು ಮಾನ್ಯ ಸಚಿವರ ಅವಗಾಹನೆಗಾಗಿ ತರಲು ಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ಆಯುಕ್ತರು, ಆಯುಕ್ತಾಲಯ, ಗುಲ್ಬರ್ಗಾ ಮತ್ತು ಧಾರವಾಡ, ಸಾರ್ವಜನಿಕ ಶಿಕ್ಷಣ ಇಲಾಖೆ.
4. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್
5. ನಿರ್ದೇಶಕರು, [ಪ್ರಾಥಮಿಕ ಶಿಕ್ಷಣ] ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, [ಪ್ರೌಢ ಶಿಕ್ಷಣ] ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಕಳುಹಿಸುತ್ತಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ಪ್ರಗತಿ ವರದಿಯನ್ನು ನಿಗದಿತ ವೇಳೆಗೆ ಪಡೆದು ಕ್ರೋಢೀಕೃತ ವರದಿಯನ್ನು ಈ ಕಛೇರಿಗೆ ಸಲ್ಲಿಸುವುದು.
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ತಕ್ಷಣ ಕ್ರಮವಹಿಸಲು ಸೂಚಿಸುತ್ತಾ ಪ್ರಗತಿ ವರದಿಯನ್ನು ನಿಗದಿತ ವೇಳೆಯೊಳಗೆ ಉಪನಿರ್ದೇಶಕರಿಗೆ ಸಲ್ಲಿಸಲು ತಿಳಿಸಿದೆ.
9. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು(ಅ.ದಾ) ಜಿಲ್ಲಾ ಪಂಚಾಯತ್.
10. ಕಛೇರಿ ಪ್ರತಿ.

31/5/2010